## 26. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಾರವಳ್ಳಿ, ಶಿಕಾರಿಪುರ ತಾ॥

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಾರವಳ್ಳಿಯು 1880ರಲ್ಲಿ ಪ್ರಾರಂಭವಾಗಿದ್ದು ಸುತ್ತ ಮುತ್ತಲು ಬೆಟ್ಟ ಗುಡ್ಡಗಳಿಂದ ಆವೃತವಾದ ಸುಂದರ ಪರಿಸರವನ್ನು ಹೊಂದಿರುವ ಈ ಗ್ರಾಮದಲ್ಲಿ ಸುಮಾರು 300 ಕುಟುಂಬಗಳು ವಾಸವಾಗಿವೆ. ಹಿಂದೆ ಮಾರನಾಯಕ ಎಂಬ ಪಾಳೆಯಗಾರನ ಆಳ್ವಿಕೆಗೆ ಒಳಪಟ್ಟಿದ್ದ ಈ ಗ್ರಾಮವು ಆತನ ಹೆಸರಿಂದಲೇ ಮಾರವಳ್ಳಿ ಎಂದು ಹೆಸರುವಾಸಿಯಾಗಿದೆ. ಈ ಗ್ರಾಮದಲ್ಲಿ ಬಹಳಷ್ಟು ಜನರು ಕೃಷಿ ಕೂಲಿ ಕಾರ್ಮಿಕರಾಗಿದ್ದರೂ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ.

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ 120 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದು, ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಾದ ಕ್ರೀಡೆ, ಪ್ರತಿಭಾಕಾರಂಜಿ ಸ್ಪರ್ಧೆಗಳಲ್ಲಿ ಭಾಗವಹಿಸಿ ಜಿಲ್ಲಾ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿದ ಹಿರಿಮೆ ಈ ಶಾಲೆಯ ವಿದ್ಯಾರ್ಥಿಗಳಿಗೆ ಸಲ್ಲುತ್ತದೆ. ಶಾಲೆಯಲ್ಲಿರುವ ಸುಂದರ ಕೈತೋಟವು ಹಲವಾರು ತೇಗ ಮತ್ತು ತೆಂಗಿನ ಮರಗಳನ್ನು ಹೊಂದಿದೆ. ಹೊಂಗೆ ಮರಗಳು ಮಕ್ಕಳಿಗೆ ಬೇಸಿಗೆಯ ಸುಡು ಬಿಸಿಲಿನಲ್ಲಿ ತಂಪೆರೆಯುವ ತಾಣಗಳಾಗಿವೆ. ಶಾಲಾ ಕಾಂಪೌಂಡ್ ಸುತ್ತ ಕಳೆದ ಮಳೆಗಾಲದಲ್ಲಿ ಹಲವು ಬಗೆಯ ಗಿಡಗಳನ್ನು ನೆಟ್ಟು ಮಕ್ಕಳಿಗೆ ಗಿಡಗಳನ್ನು ಪೋಷಿಸುವ ಹೊಣೆ ನೀಡಲಾಗಿದ್ದು ವಿದ್ಯಾರ್ಥಿಗಳು ಆಸಕ್ತಿಯಿಂದ ನಿರ್ವಹಿಸುತ್ತಿದ್ದಾರೆ.

ಈಗಾಗಲೇ ಈ ಶಾಲೆಯಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿ ಉದ್ಯೋಗದಲ್ಲಿರುವ ಹಳೆಯ ವಿದ್ಯಾರ್ಥಿಗಳು, ಗ್ರಾಮಸ್ಥರು ಹಾಗೂ ಎಸ್.ಡಿ.ಎಂ.ಯವರ ಸಹಯೋಗದೊಂದಿಗೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಸಲುವಾಗಿ ಸ್ಮಾರ್ಟ್‌ಕ್ಲಾಸ್ ತರಗತಿಯನ್ನು 28/09/2018 ರಂದು ಉದ್ಘಾಟಿಸಲಾಗಿದ್ದು, ಕೊಠಡಿಗೆ ಅಗತ್ಯವಿರುವ ಬೆಂಚು, ವೈಟ್ ಬೋರ್ಡ್, ಧ್ವನಿವರ್ಧಕ, ಝೆರಾಕ್ಸ್ ಮಷಿನ್ ಇವುಗಳನ್ನು ದಾನಿಗಳಿಂದ ಪಡೆಯಲಾಗಿದೆ ಹಾಗೂ ನಿರಂತರವಾಗಿ ಡಿಜಿಟಲ್ ಆಧಾರಿತ ತರಗತಿಗಳನ್ನು ನಡೆಸುತ್ತಿದ್ದು, ಮಕ್ಕಳು ಆಸಕ್ತಿಯಿಂದ ಕಲಿಯುತ್ತಿದ್ದಾರೆ.

ನಲಿ ಕಲಿಯಲ್ಲಿ 2 ವಿಭಾಗಗಳಿದ್ದು, ಶಾಲಾ ಮುಖ್ಯಗುರುಗಳ ಸಹಕಾರದೊಂದಿಗೆ ಶಾಲಾ ಶಿಕ್ಷಕರೇ ಕೊಠಡಿಗಳಿಗೆ 40 ಕುರ್ಚಿಗಳನ್ನು ವ್ಯವಸ್ಥೆ ಮಾಡಿದ್ದು ಟೇಬಲ್‌ಗಳನ್ನು ಮಾಡಿಸುವ ಕಾರ್ಯವು ಪ್ರಗತಿಯಲ್ಲಿದೆ ಹಾಗೂ ಶಿಕ್ಷಕರೇ ಸ್ವಯಂ ಆಸಕ್ತಿಯಿಂದ, ಮುಖ್ಯ ಗುರುಗಳ ನೇತೃತ್ವದಲ್ಲಿ ನಲಿ ಕಲಿ ಕೊಠಡಿಗಳಿಗೆ ತಟ್ಟೆ, ವಾಲ್ ಸ್ಲೇಟ್, ಗೋಡೆಗಳಿಗೆ ಬಣ್ಣಗಳಿಂದ ಅಲಂಕಾರಗೊಳಿಸಿದ್ದಾರೆ. ಮಕ್ಕಳ ಗ್ರಾಮ ಸಭೆಯಲ್ಲಿ ಮಕ್ಕಳಿಗೆ ವಿಜ್ಞಾನ ವಿಷಯದಲ್ಲಿ ಇರುವ ಆಸಕ್ತಿ ಮನಗಂಡು ವಿದ್ಯಾರ್ಥಿಗಳ ಬೇಡಿಕೆ ಮೇರೆಗೆ ಪಿ.ಡಿ.ಒರವರ ನೇತೃತ್ವದಲ್ಲಿ ದಾನಿಗಳು ಶಾಲೆಗೆ ಸೂಕ್ಷ್ಮದರ್ಶಕವನ್ನು ಕೊಡುಗೆಯಾಗಿ ನೀಡಿರುತ್ತಾರೆ.

ಮಧ್ಯಾಹ್ನದ ಬಿಸಿಯೂಟದ ಸಲುವಾಗಿ ಗ್ರಾಮ ಪಂಚಾಯತ್ ಅಧ್ಯಕ್ಷರು ಊಟದ ತಟ್ಟೆಗಳನ್ನು ದಾನವಾಗಿ ನೀಡಿರುತ್ತಾರೆ. ಶಾಲೆಯು ವ್ಯವಸ್ಥಿತವಾದ ಗ್ರಂಥಾಲಯವನ್ನು ಹೊಂದಿದ್ದು, ವಿದ್ಯಾರ್ಥಿಗಳು ಸತತವಾಗಿ ಇದರ ಸದುಪಯೋಗ ಪಡೆದುಕೊಂಡು ಉತ್ತಮ ಜ್ಞಾನಾರ್ಜನೆ ಪಡೆದುಕೊಳ್ಳುತ್ತಿದ್ದಾರೆ. ಭೌತಿಕ ಮತ್ತು ಭೌದ್ಧಿಕ ಪ್ರಗತಿಗಾಗಿ ಹಲವು ಯೋಜನೆಗಳನ್ನು ಹಾಕಿಕೊಂಡಿದ್ದು ಮುಂಬರುವ ದಿನಗಳಲ್ಲಿ ಕಾರ್ಯರೂಪಕ್ಕೆ ತರಲು ಶಾಲಾ ಶಿಕ್ಷಕ ವರ್ಗ, ಎಸ್.ಡಿ.ಎಂ.ಸಿ ಅವಿರತವಾಗಿ ಶ್ರಮಿಸುತ್ತಿದ್ದಾರೆ.





**ಶಾಲೆಯ ಪ್ರವೇಶದ್ವಾರ** **ಶಾಲಾ ಆವರಣ**

ಶಾಲೆಯ ಆವರಣವು ಹಸಿರಿನಿಂದ ಕೂಡಿದ್ದು, ನೀರಿನ ಕೊರತೆಯನ್ನು ನೀಗಿಸಲು ಶುದ್ಧಕುಡಿಯುವ ನೀರಿನ ಘಟಕದಿಂದ ಹೊರ ಬಿಡುವ ಅನುಪಯುಕ್ತ ನೀರನ್ನು ಅನುಮತಿಯೊಂದಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಸ್ಮಾರ್ಟ್‌ಕ್ಲಾಸ್



ಶಾಲಾ ಸ್ಮಾರ್ಟ್‌ಕ್ಲಾಸ್‌ನಲ್ಲಿ ಪ್ರತಿದಿನವೂ ದಿನಕ್ಕೊಂದು ವಿಷಯಕ್ಕೆ ಸಂಬಂಧಿಸಿದಂತೆ ಪಾಠಕ್ಕೆ ಪೂರಕವಾದ ಬೋಧನೆ ಪ್ರಕ್ರಿಯೆ ನಡೆಯುತ್ತಿದ್ದು, ವ್ಯಾಕರಣಾಂಶಗಳು, ವಿಜ್ಞಾನ ಪ್ರಯೋಗ ವಿಡಿಯೋಗಳ, ನೀತಿ ಶಿಕ್ಷಣಕ್ಕೆ ಕಥೆಗಳು, ಸಮಾಜ ವಿಷಯಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ಸ್ಥಳಗಳ ಪರಿಚಯ ಮಾಡಿಸಲು ಸಹಕಾರಿಯಾಗಿದ್ದು, ಮಕ್ಕಳ ಕಲಿಕೆಗೆ ಸಹಕಾರಿಯಾಗಿದ್ದು, ಹೆಚ್ಚು ಆಸಕ್ತಿಯಿಂದ ತೊಡಗಿಸಿಕೊಳ್ಳುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ಕಂಪ್ಯೂಟರ್ ಶಿಕ್ಷಣ ನೀಡುವ ಬಗ್ಗೆ ಚಿಂತನೆ ನಡೆಸಲಾಗಿದೆ.





### ನಲಿ–ಕಲಿ ಕೊಠಡಿಗೆ ಶಾಲಾ ಶಿಕ್ಷಕರಿಂದ ಕುರ್ಚಿಗಳ ಕೊಡುಗೆ

ಮಳೆಗಾಲದಲ್ಲಿ ಕೆಸರಿನಿಂದ ಕೂಡಿದ ನೆಲದ ಮೇಲೆ ಕೂತು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ತೊಡಕಾಗುತ್ತಿದ್ದದ್ದನ್ನು ಕಂಡು ಶಿಕ್ಷಕರೇ ಮಕ್ಕಳಿಗೆ ಕುರ್ಚಿ ವ್ಯವಸ್ಥೆಯನ್ನು ಮಾಡಿರುತ್ತಾರೆ. ನಲಿ ಕಲಿ



ಕೊಠಡಿಯನ್ನು ಸುಂದರ ಆಕರ್ಷಣೀಯಗೊಳಿಸುವ ಉದ್ದೇಶದಿಂದ ಶಾಲಾ ಶಿಕ್ಷಕರೇ ,ಮುಖ್ಯಶಿಕ್ಷಕರ ಸಹಕಾರದೊಂದಿಗೆ ಬಣ್ಣ ಬಣ್ಣದ ಚಿತ್ತಾರವುಳ್ಳ ತಟ್ಟೆಗಳನ್ನು . ವಾಲ್ ಸ್ಲೇಟ್ ಗಳನ್ನು ಒಳಗೋಡೆಗಳಿಗೆ ಬಣ್ಣವನ್ನು ಬಳಿದು ಅಲಂಕೃತಗೊಳಿಸಿದ್ದಾರೆ.



**ಶಾಲಾ ಹೊರಾಂಗಣ**




**ದಾನಿಗಳಿಂದ ಶಾಲೆಗೆ ಸೂಕ್ಷ್ಮದರ್ಶಕ ಕೊಡುಗೆ**

ಶಾಲಾ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಉದ್ದೇಶದಿಂದ ಮಕ್ಕಳ ಗ್ರಾಮ ಸಭೆಯಲ್ಲಿನ ಮಕ್ಕಳ ಬೇಡಿಕೆ ಮೇರೆಗೆ ಪಿ.ಡಿ.ಒರವರ ನೇತೃತ್ವದಲ್ಲಿ ಊರಿನ ದಾನಿಗಳಿಂದ ಸೂಕ್ಷ್ಮದರ್ಶಕವನ್ನು ದಾನವಾಗಿ ಪಡೆಯಲಾಯಿತು.



ಪ್ರಸಕ್ತ ಸಾಲಿನಲ್ಲಿ ಶಾಲೆಯ ವಿದ್ಯಾರ್ಥಿಯಾದ ದೀಕ್ಷಿತ್ ತಾಲ್ಲೂಕ್ ಮಟ್ಟದ ಪ್ರತಿಭಾ ಕಾರಂಜಿಯ ಕ್ಲೇಮಾಡೆಲಿಂಗ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ ಕ್ಷಣ.